ಅದನ್ನು supply ಮಾಡುತ್ತೇವೆ. ಮೆಟೀರಿಯಲ್ ಸಪ್ಲೈ ಆದ ಮೇಲೂ ಕೂಡ ಅದನ್ನು ಟೆಸ್ಟ್ ಮಾಡತಕ್ಕಂಥ ಪದ್ಧತಿ ಇದೆ. ಔಷಧಿಯ ಗುಣಮಟ್ಟ ಸರಿಯಾಗಿ ಇಲ್ಲದೆ ಇರುವುದರಿಮದ 5 ಎಮ್ಮೆಗಳು ಸತ್ತು ಹೋದವು ಎಂದು ಮಾನ್ಯ ಸದಸ್ಯರು ಹೇಳಿರತಕ್ಕಂಥದರ ಬಗ್ಗೆ ನಿರ್ದಿಷ್ಟವಾಗಿ ವರದಿ ತರಿಸಿಕೊಂಡು ಅದರ ಬಗ್ಗೆ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು:– ಅದರ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಅವರಿಗೆ ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸರಬರಾಜು ಆಗಿರುವ ಔಷಧಿಯನ್ನು ಸರಿಯಾಗಿ ಪರೀಕ್ಷೆ ಮಾಡಬೇಕೆಂಬುದು ನನ್ನ ಅಪೇಕ್ಷೆ.

ಶ್ರೀ ಟಿ.ಬಿ. ಜಯಚಂದ್ರ:– ಅದನ್ನು ಕೂಡ ಪರೀಕ್ಷೆಗೆ ಒಳಪಡಿಸಿದ್ದೇವೆ. ಈಗ ಅದೂ ಕೂಡ ಪರೀಕ್ಷೆ ಆಗುತ್ತದೆ.

ಅಧ್ಯಕ್ಷರು:– ಮುಂದಿನದು ಮಾನ್ಯ ಬಿ.ಆರ್. ಪಾಟೀಲ್‌ರವರದು, ಅವರು ಇಲ್ಲ. ಮಾನ್ಯ ಕೆ.ಎಂ. ಶಿವಲಿಂಗೇಗೌಡರೇ, ತಾವು ಕೇಳಿ.

3. **ವಿಷಯ:**–ಅರಸೀಕೆರೆ ಪುರಸಭೆಯನ್ನು ನಗರಸಭೆಯನ್ನಾಗಿ ಮಾಡುವ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):– ಮಾನ್ಯ ಅಧ್ಯಕ್ಷರೆ, ಅರಸೀಕೆರೆ ಪುರಸಭೆಯನ್ನು ನಗರಸಭೆಯನ್ನಾಗಿ ಮಾಡಬೇಕೆಂದು ಈಗಾಗಲೇ ಮಾಹಿತಿ ಬಂದಿತ್ತು. ಆದರೆ, ಮೊನ್ನೆದಿವಸ 8 ಅನ್ನು announce ಮಾಡಿದ್ದೀರಿ. ಆದರೆ, ನಮ್ಮದು ಲಿಸ್ಟ್‌ನಲ್ಲಿ 6ನೇಯದಾಗಿತ್ತು. ಆದರೆ, ನಮ್ಮದನ್ನು ಕೈಬಿಟ್ಟು ಬೇರೆವುಗಳನ್ನು ಮಾಡಿದ್ದೀರಿ. ಈ ರೀತಿಯ ತಾರತಮ್ಯ ಏಕೆ?

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):– ಅರಸೀಕೆರೆ ಪುರಸಭೆಯನ್ನು ಪರಿವರ್ತಿಸುವ ಬಗ್ಗೆ ಆರ್ಥಿಕ ಇಲಾಖೆಯು ಸಹಮತಿ ನೀಡಿದ್ದು, ಅದರಂತೆ ಕಡತವನ್ನು ಅನುಮೋದನೆ ಕೋರಿ ಸಚಿವ ಸಂಪುಟ ಶಾಖೆಗೆ ಸಲ್ಲಿಸಲಾಗಿದೆ. ಸಚಿವ

ಸಂಪುಟದ ಅನುಮೋದನೆ ನಂತರ ಕರ್ನಾಟಕ ಪೌರಸಭೆಗಳ ಕಾಯ್ದೆ 1964ರನ್ವಯ ಘನತೆವೆತ್ತ ರಾಜ್ಯಪಾಲರ ಅನುಮೋದನೆ ಪಡೆದು ನಿಯಮಾನುಸಾರ ಅರಸೀಕೆರೆ ಪುರಸಭೆಯನ್ನು ನಗರಸಭೆಯನ್ನಾಗಿ ಪರಿವರ್ತಿಸುವ ಬಗ್ಗೆ ಕ್ರಮ ಜರುಗಿಸಲಾಗುವುದು.

ಶ್ರೀ ಖಮರುಲ್ ಇಸ್ಲಾಂ (ಪೌರಾಡಳಿತ, ಸಾರ್ವಜನಿಕ ಉದ್ದಿಮೆ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು):– ಮಾನ್ಯ ಅಧ್ಯಕ್ಷರೆ, ಅರಸೀಕೆರೆ TMC ಯಿಂದ CMC ಮಾಡುವುದಕ್ಕೆ ಎಲ್ಲಾ ಪ್ರೊಸೀಜರ್ ಪ್ರಕಾರ ಕೆಲಸ ಆಗಿದೆ. I have already submitted the file to the cabinet. ಕ್ಯಾಬಿನೆಟ್ ಮುಂದಿದೆ. Next ಅದನ್ನೂ ಸಹ ಮಾಡಲಾಗುತ್ತದೆ.

ಅಧ್ಯಕ್ಷರು:– ಆಯಿತು.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಸಚಿವರೇ, ನಮ್ಮದು ಸೀನಿಯಾರಿಟಿಯಲ್ಲಿತ್ತು. ಆದರೆ, ನಮ್ಮದನ್ನು ಬಿಟ್ಟು ಬೇರೆ ಎಲ್ಲಾ ಮಾಡಿದ್ದೀರಿ.

ಶ್ರೀ ಖಮರಲ್ ಇಸ್ಲಾಂ:– ಆ ರೀತಿ ಇಲ್ಲ. 2011 ಸೆನ್ಸ್ಸ್ ಪ್ರಕಾರ Whoever have come, we are fulfilling. ಎಲ್ಲಾ ಪ್ರೋಸೆಸ್ ಅನ್ನು ಮುಗಿಸಲಾಗಿದೆ.

ಅಧ್ಯಕ್ಷರು:– ಕ್ಯಾಬಿನೆಟ್‌ಗೆ ಹೋಗುತ್ತದೆ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಅದು ಕ್ಯಾಬಿನೆಟ್‌ಗೆ ಹೋಗಬೇಕಾಗಿತ್ತು. ಆದರೆ, ನಮ್ಮದು ಹೋಗದೆ ಬೇರೆಯವರದು ಹೋಗಿದೆಯಷ್ಟೆ.

ಅಧ್ಯಕ್ಷರು:– ಮಾನ್ಯ ಸಚಿವರೇ, ಅರಸೀಕೆರೆ ವಿಚಾರ ಹೇಳಿ.

ಶ್ರೀ ಖಮರುಲ್ ಇಸ್ಲಾಂ:– Sir, the files which were coming to me, I was sending them before Cabinet. About 10 TMCs have been upgraded. Others are under the procedure. Finance Department ನಿಂದ ಅಪ್ರೂವಲ್ ಬಂದ ಮೇಲೆ ಆಗುತ್ತದೆ.

ಅಧ್ಯಕ್ಷರು:– Finance Department ನಿಂದ ಇದಕ್ಕೆ ಏಕೆ ಅಪ್ರೂವಲ್ ಬೇಕು? Population base ಮೇಲೆ ನಗರ ಸಭೆ ಎಂದು ಮಾಡಿದ್ದಾರೆ. ನಮ್ಮಲ್ಲಿಯೂ ಕೂಡ ಆಗಿದೆ. ನಾವೇನು ಯಾರಿಗೂ ಅರ್ಜಿಯನ್ನು ಕೊಟ್ಟಿಲ್ಲ. ಹಾಗೆಯೇ ಈ ಬಗ್ಗೆ ಕೋರಿಕೆಯನ್ನು ಸಹ ಮಾಡಿಲ್ಲ. ತನ್ನ ಪಾಡಿಗೆ ಅದು ಆಗುತ್ತದೆ. ಆದ್ದರಿಂದ, ಇದು Finance Departmentಗೆ ಹೋಗತಕ್ಕಂಥ ಪ್ರಶ್ನೆ ಏಕೆ ಬರುತ್ತದೆ?

ಶ್ರೀ ಕೆ.ಎಂ. ಶಿವಲಿಂಗೇಗೌಡ:– Financial burden ಆಗುವುದರಿಂದ Finance Departmentಗೆ ಹೋಗುತ್ತದೆ.

ಅಧ್ಯಕ್ಷರು:– ಎಲ್ಲಾ ಆಗಿದ್ದರೆ ಅದನ್ನು ಮಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಅದು ಆಗಿದೆ. ಕಳೆದ ವಾರದ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ನಮ್ಮದು ಸೀನಿಯಾರಿಟಿ ಇದ್ದರೂ ಸಹ ನಮ್ಮದನ್ನು ಬಿಟ್ಟು ಬೇರೆ ಎಲ್ಲವನ್ನೂ ಮಾಡಿದ್ದೀರಿ. ನಮ್ಮದನ್ನು ಮುಂದೆ ಗ್ಯಾರಂಟಿಯಾಗಿ ಮಾಡುತ್ತೀರಾ?

ಶ್ರೀ ಖಮರುಲ್ ಇಸ್ಲಾಂ:– ಹೌದು. ಮಾಡುತ್ತೇವೆ.

ಅಧ್ಯಕ್ಷರು:– ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಮಾನ್ಯ ಶಿವಲಿಂಗೇಗೌಡರೇ, ಈ ವಿಷಯ ಇಲ್ಲಿಗೆ ಬಿಡಿ.

ಶ್ರೀ ಖಮರುಲ್ ಇಸ್ಲಾಂ:– ಮಾನ್ಯ ಅಧ್ಯಕ್ಷರೆ, ಗುಲ್ಬರ್ಗದು ಕೂಡ ಇದೆ.

ಅಧ್ಯಕ್ಷರು:– ಆಯಿತು ಬಿಡಿ. ಗುಲ್ಬರ್ಗಾ ಮುಂಚೆ ಆಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಆಯಿತು. ನಮ್ಮದು ತಡವಾದರು ಪರವಾಗಿಲ್ಲ. ಆದರೆ, ಗ್ಯಾರಂಟಿಯಾಗಿ ಮಾಡಿಕೊಡಿ.

ಅಧ್ಯಕ್ಷರು:– ಆಯಿತು.